ಮಧ್ಯಂತರ ಅರ್ಜಿಗಳ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 17-03-2022 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ ವಾದಿಯರ ವಾರಸುದಾರರ ಪರ ಶ್ರೀ ಪಿ ಎನ್ ಕೆ ವಕೀಲರಿಂದ ಃ

ನಾನು ನಿವೃತ್ತ ಶಾಲಾ ಶಿಕ್ಷಕ ಎಂದರೆ ಸರಿ. ದಾವಾಸ್ವತ್ತು ಕೆ.ಕೆ ಲೇಔಟ್ ನಲ್ಲಿ ಇದೆ ಎಂದರೆ ಸರಿ. ಸದರಿ ಲೇಔಟ್ ನಲ್ಲಿ ಸುಮಾರು 7 ಎಕರೆ ಜಾಗದಲ್ಲಿ ನಿವೇಶನಗಳನ್ನು ಮಾಡಿರುತ್ತಾರೆ ಎಂದರೆ ಸರಿ. ಅದರ ಮೂಲ ಸರ್ವೆ ನಂ. 22/8, 23/4 ಮತ್ತು 23/8 ಎಂದರೆ ಸರಿ. ಸದರಿ ಜಮೀನುಗಳ ಮೂಲ ಮಾಲೀಕ ಹೊಂಬಯ್ಯ, ಪುಟ್ಟರುದ್ರಪ್ಪ ಮತ್ತು ಚಿಕ್ಕಮುನಿಯಪ್ಪ ಎಂದರೆ ಸರಿ. ನಿಡಿ-11 ಕ್ರಯಪತ್ರವನ್ನು ಎನ್.ಹೆಚ್ ಶಿವಮೂರ್ತಿರವರ ಕಡೆಯಿಂದ ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿಯವರು ಹೊಂಬಯ್ಯರವರ ಜಿಪಿಎ ಎಂದರೆ ಸರಿ. ಹೊಂಬಯ್ಯ ರವರಿಗೆ ಮಾತ್ರ ಜಿಪಿಎ ಬರೆದುಕೊಡಲು ಅಧಿಕಾರ ಇರಲಿಲ್ಲ ಎಂದರೆ ಸುಳ್ಳು.

2. ಪುಟ್ಟರುದ್ರಪ್ಪ ಮತ್ತು ಚಿಕ್ಕಮುನಿಯಪ್ಪರವರಿಂದ ದಾಖಲೆ ಬರೆಸಿಕೊಂಡಿಲ್ಲ. ದಾವಾಸ್ವತ್ತು ಮೇಲೆ ಹೇಳಿದ ಮೂರು ಸರ್ವೆ ನಂಬರುಗಳಲ್ಲಿ ಬರುತ್ತದೆ. ಆದರೆ ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದು ಈಗಲೂ ಹೇಳಲು ಆಗುವುದಿಲ್ಲ. ಹೊಂಬಯ್ಯರವರು ಶಿವಮೂರ್ತಿರವರಿಗೆ ನಿಡಿ-11 ಕ್ರಯಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಶಿವಮೂರ್ತಿ ಈಗ ಜೀವಂತ ಇಲ್ಲ. ಹೊಂಬಯ್ಯ ಕೂಡಾ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ತಾರೀಖು, ತಿಂಗಳು, ವರ್ಷ ಗೊತ್ತಿಲ್ಲ.

ಶಿವಮೂರ್ತಿ ಎನ್ನುವ ವ್ಯಕ್ತಿ ಇರಲಿಲ್ಲ ಎಂದರೆ ಸರಿಯಲ್ಲ, ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ಹೊಂಬಯ್ಯರವರು ತೀರಿಕೊಂಡ ಮೇಲೆ ಅವರ ಮಕ್ಕಳು ಯಾರು ಎಂದು ವಿಚಾರಿಸಿಲ್ಲ. ನಿಡಿ-11 ಕ್ರಯಪತ್ರವನ್ನು ಶಿವಮೂರ್ತಿ ಕಡೆಯಿಂದ ಬರೆಸಿಕೊಳ್ಳಲು ನನಗೆ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸುಳ್ಳು. ನಿಡಿ-11 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

3. ದಿನಾಂಕ 19-02-1986 ರಂದು ಮೇಲೆ ಹೇಳಿದ ಹೊಂಬಯ್ಯ, ಪುಟ್ಟರುದ್ರಪ್ಪ ಮತ್ತು ಚಿಕ್ಕಮುನಿಯಪ್ಪ ರವರು ಮದನ್ ಮತ್ತು ಸೋಮಶೇಖರರರವರಿಗೆ ಕ್ರಯದ ಕರಾರುಪತ್ರ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ದಿನಾಂಕ 18-06-1987 ರಂದು ಮೂಲ ಮಾಲೀಕರು ಕೃಷ್ಣಯ್ಯನಿಗೆ ಹಣ ಸಂದಾಯ ರಸೀದಿ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಿನಾಂಕ 25-01-1989 ರಂದು ಮೂಲ ಮಾಲೀಕರವರು ಕೃಷ್ಣಯ್ಯರವರಿಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದರು ಎಂದರೆ ಸುಳ್ಳು. ದಿನಾಂಕ 11-11-1989 ರಂದು ಸದರಿ ಮದನ್ ಮತ್ತು ಸೋಮಶೇಖರವರು ಕೆ.ಸಿ ಕೃಷ್ಣಯ್ಯರವರಿಗೆ Assignment deed ಬರೆದುಕೊಟ್ಟಿದ್ದರು ಎಂದರೆ ಸುಳ್ಳು. ಮೇಲೆ ಹೇಳಿದ ಪೂರ್ತಿ 7 ಎಕರೆ ಜಮೀನಿನಲ್ಲಿ ಕೃಷ್ಣಯ್ಯರವರು ಲೇಔಟ್ ಮಾಡಿದ್ದರಿಂದ ಅದಕ್ಕೆ ಕೆ.ಕೆ ಲೇಔಟ್ ಎಂದು ಹೆಸರು ಆಗಿದೆ ಎಂದರೆ ಗೊತ್ತಿಲ್ಲ.

4. ಮೇಲೆ ಹೇಳಿದ ಲೇಔಟ್ ನಲ್ಲಿ ವಾದಿಯು ಸದರಿ ಕೃಷ್ಣಯ್ಯರವರಿಂದ ನಿವೇಶನ ನಂ.113 ಮತ್ತು 114 ನೇದವುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಕೃಷ್ಣಯ್ಯ ವ್ಯಕ್ತಿಯೇ ಗೊತ್ತಿಲ್ಲ ಸೃಷ್ಟಿಸಿರುತ್ತಾರೆ ಎಂದು ಹೇಳುತ್ತಾರೆ. ನಿವೇಶನ ಸಂ.113 ರ ಸ್ವಾಧೀನ

ಕೊಡಬೇಕು ಎಂದು ಕೇಳಿ ವಾದಿಯು ಸಲ್ಲಿಸಿದ ಓ.ಎಸ್ ನಂ. 5911/2010 ವಜಾ ಆಗಿದೆ ಎಂದರೆ ಸರಿಯಲ್ಲ. ಪುನಃ ಹೇಳುತ್ತೇನೆ ಗೊತ್ತಿಲ್ಲ. ಪುನಃ ಹೇಳುತ್ತೇನೆ ಹೈಕೋರ್ಟ್ ನಲ್ಲಿ ಪೆಂಡಿಂಗ್ ಇದೆ. ಅದರ ಸಂಖ್ಯೆ ಆರ್.ಎಫ್.ಎ ನಂ.1135/2018 ಇರುತ್ತದೆ. ಈ ದಾವಾಆಸ್ತಿಗೆ ಅದು ಸಂಬಂಧ ಇಲ್ಲ ಎಂದರೆ ಸರಿ. ನಿವೇಶನ ಸಂ.113 ನೇದನ್ನು ಹೊಂಬಯ್ಯರವರಿಂದ ಪಡೆದಿರುತ್ತೇನೆ. ಹೊಂಬಯ್ಯನಿಂದ ಮಾತ್ರ ಕ್ರಯಕ್ಕೆ ಪಡೆಯಲು ಅಧಿಕಾರ ಇಲ್ಲ ಎಂದು ಸದರಿ ದಾವೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

5. ವಾದಿ ದಾವಾಆಸ್ತಿಯನ್ನು ಕ್ರಯಕ್ಕೆ ಪಡೆದ ಮೇಲೆ ನಾನು ನಿಡಿ-11 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯು ನಾನು ಮೊದಲು ಖರೀದಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಗುರುತಿಸಿಕೊಂಡಿರುವ ಉಳಿದ ದಾಖಲೆಗಳನ್ನು ಕೂಡಾ ನಿಡಿ-11 ದಾಖಲೆಯ ಆಧಾರದ ಮೇಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .